http://www.howtoexam.com

**MK (F) 06**

# ಅಂತಿಮ ಎಂ.ಎ. ಪರೀಕ್ಷೆ, ಜೂನ್ 2010
## ಸಿಮ್‌ಸ್ಕೀಂ
## ಕನ್ನಡ
## ಕೋರ್ಸ್ - VI : ಪ್ರಾಚೀನ ಕನ್ನಡ ಸಾಹಿತ್ಯ - ವಿಶೇಷ ಕವಿ - ಪಂಪ

ಸಮಯ : 3 ಗಂಟೆಗಳು ಗರಿಷ್ಠಾಂಕ : 90

***ಸೂಚನೆಗಳು :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಆರು** ಪ್ರಶ್ನೆಗಳಿಗೆ ಉತ್ತರಿಸಿ.*
*2) **ಎಲ್ಲಾ** ಪ್ರಶ್ನೆಗಳಿಗೂ **ಸಮಾನ** ಅಂಕಗಳು.* **(15×6=90)**

1. ಪಂಪನ ಕಾಲ, ದೇಶ ಮತ್ತು ವ್ಯಕ್ತಿತ್ವವನ್ನು ವಿವರಿಸಿ.

2. ವಿಕ್ರಮಾರ್ಜುನ ವಿಜಯದಲ್ಲಿ ಪಂಪನು ಮಾಡಿಕೊಂಡಿರುವ ಕಥಾ ಸನ್ನಿವೇಶದ ಬದಲಾವಣೆ ಕುರಿತು ಬರೆಯಿರಿ.

3. ಆದಿ ಪುರಾಣದಲ್ಲಿ ಧರ್ಮ ಮತ್ತು ಕಾವ್ಯಧರ್ಮದ ಸಮ್ಮಿಲನವನ್ನು ಕುರಿತು ವಿಶ್ಲೇಷಿಸಿ.

4. ವಜ್ರಜಂಘ ಮತ್ತು ಶ್ರೀಮತಿಯರ ಕಥಾಪ್ರಸಂಗ ಕುರಿತು ವಿಶ್ಲೇಷಿಸಿ.

5. ಭರತನ ಚಕ್ರರತ್ನ ಪ್ರಸಂಗ ಮತ್ತು ದಿಗ್ವಿಜಯ ವಿವರಗಳನ್ನು ಸಂಗ್ರಹಿಸಿ ಬರೆಯಿರಿ.

6. ಭರತ ಮತ್ತು ಬಾಹುಬಲಿಯರ ಯುದ್ಧ ಮತ್ತು ತ್ಯಾಗ, ಆದಿಪುರಾಣದ ಉನ್ನತ ಭಾಗ – ಚರ್ಚಿಸಿ.

7. ಪಂಪನ ಪಾಂಡಿತ್ಯ ಪ್ರತಿಭೆಯ ಕಾವ್ಯಭಾಗವೆಂದರೆ ನೀಲಾಂಜನೆ ನೃತ್ಯ ಪ್ರಸಂಗ – ಹೇಗೆ ?

8. ಪಂಪನ ಭಾಷೆ ಮತ್ತು ಶೈಲಿಯನ್ನು ಕುರಿತು ಚರ್ಚಿಸಿ.

9. ಪಟ್ಟಾಭಿಷೇಕ ಸಂದರ್ಭದಲ್ಲಿ ಭೀಷ್ಮ ಕರ್ಣರ ಸಂವಾದದ ನಾಟಕೀಯತೆ ಮತ್ತು ಅದರ ಮಹತ್ವವನ್ನು ವಿವರಿಸಿ.

10. **ಒಂದು** ಪದ್ಯದ ಭಾವ ಸ್ವಾರಸ್ಯ ಬರೆಯಿರಿ : **5**

ಅ) ನಾರಿ ರೂಪದ ಯಂತ್ರಂ
ಚಾರುತರಂ ನೋಡೆನೋಡೆ ಕರಗಿದುದಿಂ ಸಂ।
ಸಾರದನಿತ್ಯತೆ ಮನದೊಳ್
ಬೇಱೂರಿದುದೀಗಳೆಂತಿದಂ ಕಡೆಗಣಿಪೆಂ ॥
ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ॥

P.T.O.

Career suggestion, Job opening college university and school information

http://www.howtoexam.com



ಆ) **ಎರಡನ್ನು** ಕುರಿತು ಸಂದರ್ಭಸ್ವಾರಸ್ಯ ಬರೆಯಿರಿ : **10**

೧) ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ

೨) ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ

೩) ಧೂತನಪ್ಪನ ಬೆಳ್ವನ ನುಡಿಗೇಳ್ದು ಮುಳಿಯಲಾಗದು

೪) ಪನಿಪುಲ್ಲಂ ನಕ್ಕೆ ತೃಷ್ಣೆ ಪೇಟ್ ಪೋದಪುದೆ

೫) ಪಿರಿಯಣ್ಣಂಗೆಱಗುವುದೇಂ ಪರಿಭವಮೆ

೬) ಸಂಸೃತಿ ಭೋಗಂಗಳ್ ಭೋಗಿ ಭೋಗದಿಂ ವಿಷಮಂಗಳ್.

---

HowToExam.com

Career suggestion, Job opening college university and school information